ಹೆಣ್ಣುಮಕ್ಕಳನ್ನು ಹತ್ತಿಕ್ಕಲಿಕ್ಕೆ, ಅವರ ಮೇಲೆ ಗಂಡಿನ ಯಜಮಾನಿಕೆ ಸಾಧಿಸಲಿಕ್ಕೆ, ಹೊಸ ಪದಪುಂಜವೊಂದನ್ನು ಸೃಷ್ಟಿಸಲಾಗಿದೆ. 'ಆಧುನಿಕ ಮಹಿಳೆ' ಎನ್ನುವ ಆ ಹೊಸ ಬೈಗುಳವನ್ನು ಸಚಿವರೊಬ್ಬರು ಠಂಕಿಸಿದ್ದಾರೆ. ಕನ್ನಡ ರಾಜ್ಯೋತ್ಸವ ಹೊಸ್ತಿಲಲ್ಲಿರುವ ಸಂದರ್ಭದಲ್ಲಿ, ಈ ಹೊಸ ಪದ ಕನ್ನಡ ನಾಡು-ನುಡಿಗೆ ರಾಜಕಾರಣಿಗಳಿಂದ ದೊರೆತಿರುವ ಉಡುಗೊರೆ! ಅಂದಹಾಗೆ, ಈ ಹೊಸ ಪರಿಕಲ್ಪನೆಯ ಬಗ್ಗೆ ನಮ್ಮ ಮಾಡರ್ನ್ ಮಹಿಳೆಯರು ಏನನ್ನುತ್ತಾರೆ? ಪರಂಪರೆ ಮತ್ತು ಸೋಕಾಲ್ಡ್ ಆಧುನಿಕತೆಯ ನಡುವೆ 'ಇಂದಿನ ಹೆಣ್ಣು' ಅನುಭವಿಸುತ್ತಿರುವ ಸವಾಲುಗಳು ಮತ್ತು ತವಕತಲ್ಲಣಗಳ ಕುರಿತು ಚರ್ಚಿಸುವ ಇಲ್ಲಿನ ಬರಹಗಳು - ಬದಲಾಗಿರುವ ಹೆಣ್ಣು ಹಾಗೂ ಬದಲಾಗದೆ ಜಡಗಟ್ಟಿರುವ ಗಂಡು ಮನಸ್ಥಿತಿಯತ್ತ ನಮ್ಮ ಗಮನಸೆಳೆಯುತ್ತವೆ.

# ಮಾಡರ್ನ್ ಮಹಿಳೆ

## ಹೊಸ ಬೈಗುಳ?